Shri Hurakadli Ajja Shikshana Samiti's

# SMT. K. S. JIGALUR ARTS & DR. (SMT) S. M. SHESHGIRI COMMERCE COLLEGE FOR WOMEN, DHARWAD

## DEPARTMENT OF PHYSICAL EDUCATION

**Title of Activity:** 10K and Half- Marathon Race

**Date and Venue:** 17th November 2019, Hubli

**Description of Event:** On 17th November 2019, VRL, Digvijaya Media, Hubballi Fitness Club and in association with other organizations, jointly organized **10K and Half- Marathon Race** at Hubballi. The race started from K.L.E's B.V.B Engineering College. Suman Nagarkar, Actress inaugurated the race. 2000 people participated in the race. **Kum Jyoti Kattimani** of our college participated in the race and secured 1st place in 5K Run and a cash prize worth Rs.5000/-.

**List of the students :**

| Sl. No | Name of the Students | Class | Event | Achievement |
|---|---|---|---|---|
| 01 | Kum. Jyoti Kattimani | BA II | 5K Run | 1st Place and a Cash Prize of Rs. 5000/- |

S.H.A.S. SAMITI'S K.S.J. ARTS & S.M.S COMMERCE COLLEGE FOR WOMEN DHARWAD

Principal
S.H.A.S. Samiti's
Smt. K. S. Jigalur Arts and
Dr. (Smt) S. M. Sheshgiri Commerce
College for Women, Dharwad

Shri Hurakadli Ajja Shikshana Samiti's

# SMT. K. S. JIGALUR ARTS & DR. (SMT) S. M. SHESHGIRI COMMERCE COLLEGE FOR WOMEN, DHARWAD

## DEPARTMENT OF PHYSICAL EDUCATION

**Title of Activity:** 10K and Half- Marathon Race

**Date and Venue:** 17th November 2019, Hubli




S.H.A.S. SAMITI'S DHARWAD

Principal
S.H.A.S. Samiti's
Smt. K. S. Jigalur Arts and
Dr. (Smt) S. M. Sheshgiri Commerce
College for Women, Dharwad

Paper clipping on our Athleete Kum. Jyoti Kattimani - I st Place

ಚಿತ್ರನಟಿ ಸುಮನ್ ನಗರಕರ್ ಚಾಲನೆ; 2 ಸಾವಿರ ಜನ ಭಾಗಿ

# ಹಾಫ್ ಮ್ಯಾರಥಾನ್: ಕಿನ್ಯಾದ ಫಿಲಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದಲ್ಲಿ ಭಾನುವಾರ ಮುಂಜಾನೆ ನಡೆದ 'ಆರೋಗ್ಯಕ್ಕಾಗಿ ಓಟ' ಹಾಫ್ ಮ್ಯಾರಥಾನ್‌ನಲ್ಲಿ ಜಪಾನ್, ಕಿನ್ಯಾ, ಕೆನಡಾ ದೇಶಗಳ, ಮೈಸೂರು, ಬೆಂಗಳೂರು, ಮುಂಬೈ ಸೇರಿದಂತೆ ಸ್ಥಳೀಯ ಸಾವಿರಾರು ಸ್ಪರ್ಧಿಗಳು ಹೆಜ್ಜೆ ಹಾಕುವ ಮೂಲಕ ಗಮನಸೆಳೆದರು.

ಹುಬ್ಬಳ್ಳಿ ಫಿಟ್‌ನೆಸ್ ಕ್ಲಬ್ ಹಾಗೂ ವಿವಿಧ ಸಂಘ, ಸಂಸ್ಥೆಗಳ ಸಹಯೋಗದಲ್ಲಿ ಗೋಕುಲ ರಸ್ತೆಯಲ್ಲಿರುವ ಕೆಎಲ್‌ಇ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಹಾಫ್ ಮ್ಯಾರಥಾನ್' 21 ಕಿ.ಮೀ. ಪುರುಷರ ವಿಭಾಗ(18 ವರ್ಷ ಮೇಲ್ಪಟ್ಟ)ದಲ್ಲಿ ಕಿನ್ಯಾದ ಫಿಲಿಪ್ ಕಿಪ್ರೂ ಪ್ರಥಮ ಸ್ಥಾನ ಮುಡಿಗೇರಿಸಿಕೊಂಡರು.

**ಆರೋಗ್ಯ ಕಾಪಾಡಿಕೊಳ್ಳಲು ನಿತ್ಯ ವ್ಯಾಯಾಮ ಅಗತ್ಯ. ಬೆವರು ಬರುವ ಹಾಗೆ ದೇಹ ದಂಡಿಸಬೇಕು. ಪ್ರತಿನಿತ್ಯ ಓಡುವುದರಿಂದ ಮನಸ್ಸನ್ನು ಉಲ್ಲಾಸದಲ್ಲಿಡಬಹುದು**

**ಸುಮನ್ ನಗರಕರ್,**
ನಟಿ



ಹುಬ್ಬಳ್ಳಿ ಗೋಕುಲ ರಸ್ತೆಯಲ್ಲಿ ಭಾನುವಾರ ಏರ್ಪಡಿಸಿದ್ದ ಹಾಫ್ ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿದ್ದ ಸ್ಪರ್ಧಿಗಳು(ಎಡಚಿತ್ರ). 21 ಕಿಪ್ರೂ(ಮಧ್ಯದಲ್ಲಿರುವವರು), ಗಂಗಪ್ಪ ತಂಬೂರ(ದ್ವಿತೀಯ), ಮಹಾಕೂಟೇಶ್ವರ(ತೃತೀಯ) –ಪ್ರಜಾವಾಣಿ ಚಿತ್ರ: ಈರಪ್ಪ ನ

ಇದೇ ವಿಭಾಗದಲ್ಲಿ ಗಂಗಪ್ಪ ತಂಬೂರ ದ್ವಿತೀಯ, ಮಹಾಕೂಟೇಶ್ವರ ತೃತೀಯ ಸ್ಥಾನ ಪಡೆದಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಆಶಾ ಟಿ.ಪಿ ಪ್ರಥಮ, ಮೇಘನಾ ಕೆ. ದ್ವಿತೀಯ ಹಾಗೂ ಶ್ರೇಯಾ ಎಸ್ ತೃತೀಯ ಸ್ಥಾನ ಪಡೆದಿದ್ದಾರೆ.

**21 ಕಿ.ಮೀ. ಹಿರಿಯರ ವಿಭಾಗ (ಪುರುಷರು):** ಪಾಂಡುರಂಗ ಪಾಟೀಲ (ಪ್ರಥಮ), ಸುನೀಲ್ ಶಿಂಧೆ (ದ್ವಿತೀಯ), ಜಪಾನಿನ ಹಕಾರು ಮತ್ಸುಯಿ(ತೃತೀಯ).

**10 ,ಕಿ.ಮೀ. ಓಟ(18 ವರ್ಷ ಮೇಲ್ಪಟ್ಟ ಪುರುಷರ ವಿಭಾಗ):** ಸಿದ್ಧಪ್ಪ ಗುಂಡಗಿ(ಪ್ರ), ಮಂಜುನಾಥ ದೇಸಾಯಿ(ದ್ವಿ), ಮಲ್ಹೋತ್ ನರೇಶ(ತೃ). ಮಹಿಳೆಯರ ವಿಭಾಗದಲ್ಲಿ ಶಾಹೀನ್ ಧಾರವಾಡ(ಪ್ರ), ಅನಿತಾ ಓಲೇಕಾರ(ದ್ವಿ), ಐಶ್ವರ್ಯಾ(ತೃ). **ವೃದ್ಧರ ವಿಭಾಗ:** ತಿಮ್ಮಯ್ಯ ಹೆಗಡೆ(ಪ್ರ), ಭಜರಂಗ ಚವ್ಹಾಣ್(ದ್ವಿ), ಬಸವರಾ ಬಿಜ್ಜರಗಿ(ತೃ).

**5 ಕಿ.ಮೀ. ಓಟ(18 ವರ್ಷ ಮೇಲ ಪುರುಷರು):** ಪ್ರಕಾಶ ಹಾವೇರಿ(ಪ್ರ ಪುಂಡಲೀಕ ಪೂಜಾರಿ(ದ್ವಿ), ಗಾವ ನವಲಿ(ತೃ). **ಮಹಿಳೆಯರ ವಿಭಾ** ಜ್ಯೋತಿ ಕಟ್ಟಿಮನಿ(ಪ್ರ), ದಿ: ಬಿ.(ದ್ವಿ), ಮಮತಾ ಗೌಡ(ತೃ)

**15ರಿಂದ 18 ವರ್ಷದ ಒಳಗಿನ ಬಾಲ ವಿಭಾಗ:** ಪ್ರತಾಪ ಚಲವಾದಿ(ಪ್ರಥ



Zest 110

Now available at CSD | w

FOR ALL INS
8971749124
ಟಿ.ವಿಎಸ್: 982
ಬೈಲಹೊಂಗಲ:
ಉಗಾರ್ ಖುರ್ದ್: 9916264555. ನಿಪ್ಪಾ
9448833598 ಭಟ್ಕಳ: 9243753612
9742994411. ಬನಹಟ್ಟಿ 934238632

Monday 18 November 2019 Prajavani

S.H.A.S. SAMITI'S
K.S.J. ARTS & S.M.S COMMERCE COLLEGE FOR WOMEN
DHA...

Principal
S.H.A.S. Samiti's
Smt. K. S. Jigalur Arts and
Dr. (Smt) S. M. Sheshgiri Commerce
College for Women, Dharwad

4

Paper clipping on our Athlete Kum. Jyoti Kattimani I st place

2

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » HUBBALLI
ಸೋಮವಾರ 18 ನವೆಂಬರ್ 2019
18 NOVEMBER 2019

# ಹುಬ್ಬಳ್ಳಿ-ಧಾರವಾಡ ಸಿಟಿ ಎಕ್ಸ್‌ಪ್ರೆಸ್

## ಸುದ್ದಿ ಕಾರ್ನರ್

### ಕೀನ್ಯಾ ಫಿಲಿಪ್, ಕೇರಳದ ಆಸಾ ಪ್ರಥಮ

**ಹುಬ್ಬಳ್ಳಿ:** ಹಾಫ್ ಮ್ಯಾರಥಾನ್ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಕೀನ್ಯಾದ ಫಿಲಿಪ್ ಕಿಪ್ರೋ ಹಾಗೂ ಮಹಿಳೆಯರ ವಿಭಾಗದಲ್ಲಿ ಕೇರಳದ ಆಸಾ ಟಿ.ಪಿ. ವಿಜೇತರಾಗಿದ್ದಾರೆ. ಈ ಬಾರಿಯ ಹಾಫ್ ಮ್ಯಾರಥಾನ್‌ನಲ್ಲಿ ಕೀನ್ಯಾ, ಜಪಾನ್, ಕೆನಡಾದಿಂದ ಸ್ಪರ್ಧಿಗಳು ಭಾಗವಹಿಸಿದ್ದು ವಿಶೇಷವಾಗಿತ್ತು. ಫಿಲಿಪ್ ಕಿಪ್ರೋ 21.1 ಕಿ.ಮಿ. ಮಾರ್ಗವನ್ನು 1 ಗಂಟೆ 9 ನಿಮಿಷ 48 ಸೆಕೆಂಡ್‌ನಲ್ಲಿ ಪೂರೈಸಿದರು. ಆಸಾ ಟಿ.ಪಿ..1 ಗಂ. 30 ನಿ. 59 ಸೆಂ. ತೆಗೆದುಕೊಂಡರು. ಪುರುಷರ ವಿಭಾಗದಲ್ಲಿ ಗಂಗಪ್ಪ ತಂಬೂರ (1ಗಂ.10ನಿ.02ಸೆಂ.) ದ್ವಿತೀಯ, ಮಹಾಕೂಟೇಶ್ವರ (1ಗಂ.12ನಿ.30ಸೆಂ.) ತೃತೀಯ ಸ್ಥಾನ ಪಡೆದರು. ಮಹಿಳೆಯರ ವಿಭಾಗದಲ್ಲಿ ಮೇಘನಾ ಕೆ. (1ಗಂ.50ನಿ.57ಸೆಂ.) ದ್ವಿತೀಯ ಹಾಗೂ ಶ್ರೇಯಾ ಎಸ್. (1ಗಂ.56ನಿ.13ಸೆಂ) ತೃತೀಯ ಬಹುಮಾನ ಪಡೆದರು. ಮೇಘನಾ ಕೆ. ಕಳೆದ ವರ್ಷ 3ನೇ ಸ್ಥಾನ ಗಳಿಸಿದ್ದರು. 45ರಿಂದ 60 ವಯೋಮಿತಿಯ ಪುರುಷರ ವಿಭಾಗದಲ್ಲಿ ಪಾಂಡುರಂಗ ಪಾಟೀಲ, ಸುನೀಲ ಶಿಂಧೆ ಹಾಗೂ ಜಪಾನಿನ ಹಕಾರು ಮಟ್ಸೂಯಿ ಅನುಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಗಳಿಸಿದರು. ಮಹಿಳೆಯರ ವಿಭಾಗದಲ್ಲಿ ಸರೋಜಿನಿ ಮುಂಗರವಾಡಿ ಪ್ರಥಮ ಸ್ಥಾನಕ್ಕೆ ಭಾಜನರಾದರು.



ಕಿನ್ಯಾದ ಫಿಲಿಪ್ ಕಿಪ್ರೋ



ಕೇರಳದ ಆಸಾ ಟಿ.ಪಿ.

**10 ಕಿ.ಮೀ. ಸಿದ್ದಪ್ಪ, ಶಾಹೀನ ವಿಜೇತರು**

10 ಕಿ.ಮೀ. ಓಟವನ್ನು ಸಿದ್ದಪ್ಪ ಜಿ. 32ನಿ. 43ಸೆಂ. ನಲ್ಲಿ ಪೂರೈಸಿ ಪ್ರಥಮ ಸ್ಥಾನ ಪಡೆದರು. ಮಹಿಳೆಯರಲ್ಲಿ ಶಾಹೀನ ಡಿ. (44ನಿ.04ಸೆಂ.) ಮೊದಲಿಗರಾದರು. ಪುರುಷರ ವಿಭಾಗದಲ್ಲಿ ಮಂಜುನಾಥ ದ್ವಿತೀಯ, ಮಲ್ಲೋತ ಎನ್. ತೃತೀಯ, ಮಹಿಳೆಯರ ವಿಭಾಗದಲ್ಲಿ ಅನಿತಾ ಓಲೆಕಾರ ದ್ವಿತೀಯ, ಐಶ್ವರ್ಯ ತೃತೀಯ ಸ್ಥಾನ ಪಡೆದುಕೊಂಡರು. 5 ಕಿ.ಮೀ. ಓಟದ 18 ವರ್ಷ ಮೇಲ್ಪಟ್ಟ ಪುರುಷರ ವಿಭಾಗದಲ್ಲಿ ಪ್ರಕಾಶ ಹಾವೇರಿ (17ನಿ.25ಸೆಂ.) ಪ್ರಥಮ, ಪುಂಡಲೀಕ ಪೂಜಾರ (17ನಿ.40ಸೆಂ.) ದ್ವಿತೀಯ, ಗಾವಡೆ ನವಲಿ (17ನಿ.41ಸೆಂ.) ತೃತೀಯ ಸ್ಥಾನ ಪಡೆದರು. ಮಹಿಳೆಯರ ವಿಭಾಗದಲ್ಲಿ ಜ್ಯೋತಿ ಕಟ್ಟಿಮನಿ (22ನಿ.12ಸೆಂ) ಪ್ರಥಮ, ದಿವ್ಯಾ ಬಿ. (25ನಿ. 26ಸೆಂ.) ದ್ವಿತೀಯ ಹಾಗೂ ಮಮತಾ ಗೌಡ (30ನಿ. 54ಸೆಂ.) ತೃತೀಯ ಬಹುಮಾನ ಪಡೆದರು. ಒಟ್ಟಾರೆ 3.7 ಲಕ್ಷ ರೂ. ಬಹುಮಾನ ವಿತರಿಸಲಾಯಿತು.

S.H.A.S. SAMITI'S K.S.J. ARTS & S.M.S COMMERCE COLLEGE FOR WOMEN DHARWAD

Principal
S.H.A.S. Samiti's
Smt. K. S. Jigalur Arts and
Dr. (Smt) S. M. Sheshgiri Commerce
College for Women, Dharwad

Half Marathon Race – Hubballi 2019-20
17-11-2019



# ಹಾಫ್ ಮ್ಯಾರಥಾನ್‌ಗೆ ಹೆಚ್ಚಿದ ಜನ...

## ಉತ್ಸಾಹದಿಂದ ಪಾಲ್ಗೊಂಡ ಜನತೆ | ಓಡೋಣ ಬನ್ನಿ ಎಂದ 2300ಕ್ಕೂ ಅ...

■ ವಿಜಯವಾಣಿ ಸುದ್ದಿಜಾಲ ಹುಬ್ಬಳ್ಳಿ

ಹುಬ್ಬಳ್ಳಿ ಫಿಟ್‌ನೆಸ್ ಕ್ಲಬ್ (ಎಚ್‌ಎಫ್‌ಸಿ), ವಿಆರ್‌ಎಲ್ ಲಾಜಿಸ್ಟಿಕ್ಸ್ ಲಿಮಿಟೆಡ್‌ನ ಪ್ರಾಯೋಜಕತ್ವದಲ್ಲಿ ಭಾನುವಾರ ಆಯೋಜಿಸಿದ್ದ ಹುಬ್ಬಳ್ಳಿ ಹಾಫ್ ಮ್ಯಾರಥಾನ್‌ಗೆ ಭಾರಿ ಸ್ಪಂದನೆ ವ್ಯಕ್ತವಾಯಿತು. ಇದು ನಗರದಲ್ಲಿ ಹಾಫ್ ಮ್ಯಾರಥಾನ್ ಸ್ಪರ್ಧೆಯು ವರ್ಷದಿಂದ ವರ್ಷಕ್ಕೆ ಜನಪ್ರಿಯತೆ ಹೆಚ್ಚಿಸಿಕೊಂಡಿರುವುದಕ್ಕೆ ಸಾಕ್ಷಿಯಂತಿತ್ತು.

ಸೂರ್ಯ ಉದಯಿಸುವ ಮೊದಲೇ ಗೋಕುಲ ರಸ್ತೆಯ ಕೆಎಲ್‌ಇ ಐಟಿ ಆವರಣದಲ್ಲಿ ಸಾವಿರಾರು ಜನ ಜಮಾಯಿಸಿದ್ದರು. ಸುಮಾರು 2300ಕ್ಕೂ ಅಧಿಕ ಸ್ಪರ್ಧಿಗಳು ಓಡಿ ಹೆಮ್ಮೆಯಿಂದ ಬೀಗಿದ್ದು ವಿಶೇಷ. ಹುಬ್ಬಳ್ಳಿ ಹಾಫ್ ಮ್ಯಾರಥಾನ್‌ನ 5ನೇ ಆವೃತ್ತಿ ಇದು.

ಒಂದಿಷ್ಟು ಸ್ಪರ್ಧಿಗಳಿಗೆ ಗೆದ್ದೇ ಗೆಲ್ಲುವೆ ಎಂಬ ವಿಶ್ವಾಸ. ಬಹುತೇಕ ಸ್ಪರ್ಧಿಗಳಿಗೆ ತಾನು ಓಡಿದ್ದೇನೆ ಎಂಬ ಖುಷಿ. ಮ್ಯಾರಥಾನ್ ಬಗ್ಗೆ ಅಪರಿಮಿತ ಆಸಕ್ತಿ ಅನಾವರಣಗೊಂಡಿತ್ತು. ಯುವಕರು, ಮಕ್ಕಳಲ್ಲದೇ 70 ವರ್ಷ ಮೀರಿದವರು ಉತ್ಸಾಹದಿಂದ ಭಾಗವಹಿಸಿದ್ದರು. ಗೋಕುಲ ರಸ್ತೆಯಲ್ಲಿ ಕಿಲೋಮೀಟರ್ ಉದ್ದಕ್ಕೆ ಶ್ವೇತ ವರ್ಣದ ಟಿ-ಶರ್ಟ್ ಧರಿಸಿದವರು ಗುಂಪು ಗುಂಪಾಗಿ ಓಡಿದರು.

ಜಪಾನ್‌ನಿಂದ ಬಂದಿದ್ದ 45 ವರ್ಷದ ಕುಮತ್ ಸೂಯಿ ಸತತ 3ನೇ ಬಾರಿ ಹುಬ್ಬಳ್ಳಿ ಹಾಫ್ ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿದ್ದರು. ಕೀನ್ಯಾ ಹಾಗೂ ನೈಜಿರಿಯಾದ ಸ್ಪರ್ಧಿಗಳು ಭಾಗವಹಿಸಿದ್ದರು. 76 ವರ್ಷದ ಡಾ. ಗ್ರಾಮಪುರೋಹಿತ 5 ಕಿ.ಮೀ. ಓಟ ಪೂರ್ಣಗೊಳಿಸಿದರು. ಮರೇವಾಡದ 73 ವಯಸ್ಸಿನ ಶಿವಪ್ಪ ಸಲಕಿ 10 ಕಿ.ಮೀ. ಓಟದಲ್ಲಿ ಭಾಗವಹಿಸಿದ್ದರು. ಕೇರಳ, ಮಹಾರಾಷ್ಟ್ರ ಸೇರಿ ಕರ್ನಾಟಕದ ವಿವಿಧೆಡೆಯಿಂದ ಆಗಮಿಸಿದ್ದ ಸ್ಪರ್ಧಿಗಳು ಓಡಿದರು. ಧಾರವಾಡ ಪೊಲೀಸ್ ಇನ್ಸ್‌ಪೆಕ್ಟರ್ (ಸಂಚಾರ) ಮುರುಗೇಶ ಚನ್ನಣ್ಣವರ ಸ್ಪರ್ಧಿಸಿದ್ದರು.

ಭಾನುವಾರ ಬೆಳಗ್ಗೆ 5 ಗಂಟೆಯಿಂದ 3 ತಾಸು ಗೋಕುಲ ರಸ್ತೆ ಜನದಟ್ಟಣೆಯಿಂದ ಕೂಡಿತ್ತು. ಮ್ಯಾರಥಾನ್ ಹಿನ್ನೆಲೆಯಲ್ಲಿ ರಸ್ತೆಯಲ್ಲಿ ವಾಹನ ಸಂಚಾರ ನಿಯಂತ್ರಿಸಲಾಗಿತ್ತು. ಓಟಕ್ಕೆ ಕೆಲ ದಿನಗಳ ಹಿಂದೆಯೇ ಹೆಸರು ನೋಂದಣಿ ಪ್ರಕ್ರಿಯೆ ಆರಂಭಗೊಂಡಿತ್ತು. ಮುಂಚಿತವಾಗಿ ಕೆಲವರು ಹೆಸರು ನೋಂದಾಯಿಸಿದ್ದರೆ, ಕೆಲವರು ಭಾನುವಾರ ಬೆಳಗ್ಗೆ ಸ್ಥಳದಲ್ಲಿಯೇ ಹೆಸರು ನೋಂದಾಯಿಸಿ ಓಡಿದರು. 21.1 ಕಿ.ಮೀ., 10 ಕಿ.ಮೀ. ಹಾಗೂ 5 ಕಿ.ಮೀ. ವಿಭಾಗದಲ್ಲಿ ಸ್ಪರ್ಧೆಗಳು ನಡೆದವು. ನಿರೀಕ್ಷೆಗೂ ಮೀರಿ ಹೆಚ್ಚು ಜನ ಓಟ ಪೂರ್ಣಗೊಳಿಸಿದರೆ, ಕೆಲವರು ಓಟ ಪೂರ್ಣಗೊಳಿಸದಿದ್ದರೂ ಸಾವಿರಾರು ಜನರ ನಡುವೆ ಓಡಿದ್ದೇವೆ ಎಂಬ ಸಂಭ್ರಮದಲ್ಲಿದ್ದರು.

21.1 ಕಿ.ಮೀ. ಹಾಫ್ ಮ್ಯಾರಥಾನ್‌ಗೆ ನಟಿ ಸುಮನ್ ನಗರಕರ ಹಾಗೂ ವಿಆರ್‌ಎಲ್ ಲಾಜಿಸ್ಟಿಕ್ ಲಿಮಿಟೆಡ್‌ನ ಸಿಎಫ್‌ಒ ಸುನೀಲ ನಲವಡಿ ಚಾಲನೆ ನೀಡಿದರು. 10 ಕಿ.ಮೀ. ಓಟಕ್ಕೆ ದೇಶಪಾಂಡೆ ಪ್ರತಿಷ್ಠಾನದ ಸಿಇಒ ವಿವೇಕ ಪವಾರ ಹಾಗೂ 5 ಕಿ.ಮೀ. ಓಟಕ್ಕೆ ಪೊಲೀಸ್ ಆಯುಕ್ತ ಆರ್. ದಿಲೀಪ್ ಚಾಲನೆ ನೀಡಿದರು. ಮೂರು ವಿಭಾಗದ ಸ್ಪರ್ಧೆಯನ್ನು ಬೇರೆ ಮಾರ್ಗದಲ್ಲಿ ಪ್ರತ್ಯೇಕವಾಗಿ ನಡೆಸಲಾಯಿತು. ಸ್ಪರ್ಧೆಯ ಆರಂಭ ಮತ್ತು ಅಂತ್ಯ ಕೆಎಲ್‌ಇ ಐಟಿ ಕಾಲೇಜ್ ಆವರಣವಾಗಿತ್ತು. ಹಾಫ್ ಮ್ಯಾರಥಾನ್ ಸ್ಪರ್ಧಿಗಳು ಗೋಕುಲ ರಸ್ತೆ-ತಾರಿಹಾಳ ಬೈಪಾಸ್ ಮಾರ್ಗವಾಗಿ ಗಾಮನಗಟ್ಟಿಯವರೆಗೆ ಓಡಿ ವಾಪಸ್ ಬಂದರು. 10 ಕಿ.ಮೀ. ಸ್ಪರ್ಧಿಗಳು ತಾರಿಹಾಳ ಬೈಪಾಸ್‌ವರೆಗೆ ಹಾಗೂ 5 ಕಿ.ಮೀ. ಸ್ಪರ್ಧಿಗಳು ಗೋಕುಲ ರಸ್ತೆಯ ಇನ್ಫೋಸಿಸ್ ಕಚೇರಿಯವರಿಗೆ ಓಡಿ ಯೂ ಟರ್ನ್ ಪಡೆದರು.


ಸ್ಪರ್ಧಿಗಳಿಗೆ ಮಾರ್ಗ ಮಧ್ಯದಲ್ಲಿ ಕುಡಿಯುವ ನೀರು, ಬಾಳೆಹಣ್ಣು, ಶೇಂಗಾ ಚಿಕ್ಕಿ ವ್ಯವಸ್ಥೆ ಮಾಡಲಾಗಿತ್ತು. ಆಂಬುಲೆನ್ಸ್, ಸೈಕಲ್ ಅಸಿಸ್ಟಂಟ್, ಸ್ವಯಂಸೇವಕರನ್ನು ನಿಯೋಜಿಸಲಾಗಿತ್ತು.

ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಸ್ಕೇಟಿಂಗ್‌ನಲ್ಲಿ 400 ಮೀ. ಮಾರ್ಗವನ್ನು 51.25 ಸೆಕೆಂಡ್‌ನಲ್ಲಿ ಪೂರ್ಣಗೊಳಿಸಿ ವಿಶ್ವದಾಖಲೆ ಬರೆದ ಓಜಲ್ ನಲವಡಿ ಹಾಗೂ ಇತರರನ್ನು ಸನ್ಮಾನಿಸಲಾಯಿತು.

ಹುಬ್ಬಳ್ಳಿ ಫಿಟ್‌ನೆಸ್ ಕ್ಲಬ್ ಅಧ್ಯಕ್ಷ ಡಾ. ಎಸ್.ಬಿ. ಬಳಿಗಾರ, ಡಾ. ಜಿ.ಸಿ. ಪಾಟೀಲ, ಡಾ. ಮಹೇಶಕುಮಾರ, ಕಿಮ್ಸ್ ನಿರ್ದೇಶಕ ಡಾ. ರಾಮಲಿಂಗಪ್ಪ ಅಂಟರತಾನಿ, ನ್ಯೂ ಇಂಡಿಯಾ ಅಶ್ಯೂರನ್ಸ್ ಸಿಆರ್‌ಎಂ ರವಿಕೃಷ್ಣ, ಡಾ. ಗಿರೀಶ ಬಾಳಿಕಾಯಿ, ಬಬ್ರೂ ಚಿತ್ರದ ನಾಯಕ ನಟ ಮಾಹಿ ಹಿರೇಮಠ, ನಿರ್ಮಾಪಕ ಗುರು ನಾಗರಾಜ, ಚಿತ್ರದ ತಂಡದ ಇತರ ಸದಸ್ಯರು ಇದ್ದರು.



ಹುಬ್ಬಳ್ಳಿ ಹಾಫ್ ಮ್ಯಾರಥಾನ್‌ಗೆ ನಟಿ ಸುಮನ್ ನಗರಕರ್, ದೇಶಪಾಂಡೆ ಫೌಂಡೇಷನ್ ಸಿಇಒ ವಿವೇಕ ಪವಾರ ಚಾಲನೆ ನೀಡಿದರು. ಚಿತ್ರನಟ ಮಾಹಿ ಹಿರೇಮಠ, ಹುಬ್ಬಳ್ಳಿ ಫಿಟ್ನೆಸ್ ಕ್ಲಬ್ ಅಧ್ಯಕ್ಷ ಡಾ.ಎಸ್.ಪಿ. ಬಳಿಗಾರ, ಇನ್ಸ್‌ಪೆಕ್ಟರ್ ಮುರುಗೇಶ ಚನ್ನಣ್ಣವರ, ಡಾ. ಗಿರೀಶ ಬಾಳಿಕಾಯಿ, ಇತರರು ಇದ್ದರು.



### ಮಲ್ಲಕಂಬ ಝಲಕ್

ಕುಂದಗೋಳ ತಾಲೂಕು ಕಮಡೊಳ್ಳಿ ಗ್ರಾಮದ ಜೈ ಕರ್ನಾಟಕ ಮಲ್ಲಕಂಬ ಅಕಾಡೆಮಿಯ ಮಕ್ಕಳು ನಡೆಸಿಕೊಟ್ಟ ಮಲ್ಲಕಂಬ ಪ್ರದರ್ಶನ ನೋಡುಗರು ಹುಬ್ಬೇರಿಸುವಂತಿತ್ತು. ಮಲ್ಲಕಂಬದ ಮೇಲೆ ಮಕ್ಕಳು ವೀರಭದ್ರಾಸನ, ಕುರ್ಮಾಸನ, ಮತ್ಸ್ಯಾಸನ, ಹನ್ನುಮಧ್ವಜ, ರಸರಂಗ, ಪಶ್ಚಿಮೋತ್ಥಾಸನ, ದೇವಸ್ಥಾನದ ಗೋಪುರ, ಅಂಬಾರಿ, ಪಿರಾಮಿಡ್, ಏಕಪಾದಾಸನ ಪ್ರದರ್ಶನ ಮಾಡಿದರು. ಹಗ್ಗದ ಮಲ್ಲಕಂಬದಲ್ಲಿ ವಿದ್ಯಾರ್ಥಿನಿಯರು ವಿವಿಧ ಆಸನ ಪ್ರದರ್ಶಿಸಿದರು. ಅಕಾಡೆಮಿ ಸ್ಥಾಪಕ ಸಿದ್ಧಾರೂಢ ಹೂಗಾರ ನೇತೃತ್ವದಲ್ಲಿ ಪ್ರದರ್ಶನ ಜರುಗಿತು.

### 87 ವರ್ಷದ ಹಿರಿಯ ಸ್ಪರ್ಧಿ

87 ವರ್ಷದ ಬೆಂಗಳೂರಿನ ಜನಾರ್ದನ ಬ್ಯಾಲಹಳ್ಳಿ 21.1 ಕಿ.ಮೀ. ಓಟವನ್ನು ಪೂರ್ಣಗೊಳಿಸಿ ಹುಬ್ಬಳ್ಳಿ ಹಾಫ್ ಮ್ಯಾರಥಾನ್ ಸ್ಪರ್ಧೆಯಲ್ಲಿ ಗಮನ ಸೆಳೆದರು. ಇಂದಿನವರೆಗಿನ ಒಟ್ಟು 5 ಹುಬ್ಬಳ್ಳಿ ಹಾಫ್ ಮ್ಯಾರಥಾನ್‌ನಲ್ಲಿ ಅತಿ ಹಿರಿಯ ಸ್ಪರ್ಧಿ ಇವರೇ ಆಗಿದ್ದಾರೆ. 76 ವಯಸ್ಸಿನ ಶಿವಪ್ಪ ಸಲಕಿ ಈವರೆಗೆ ಅತಿ ಹಿರಿಯ ಸ್ಪರ್ಧಿ ಆಗಿದ್ದರು. ಶಿವಪ್ಪ ಸಲಕಿ ಈ ಬಾರಿ 10 ಕಿ.ಮೀ. ವಿಭಾಗದಲ್ಲಿ ಸ್ಪರ್ಧಿಸಿದ್ದರು. ಮಲೇಷಿಯಾದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಗೊಂಡಿರುವ ಶಿವಪ್ಪ ಸಲಕಿ ಅವರಿಗೆ ಹುಬ್ಬಳ್ಳಿ ಫಿಟ್ನೆಸ್ ಕ್ಲಬ್ 5 ಸಾವಿರ ರೂ. ಸಹಾಯಧನ ನೀಡುವುದಾಗಿ ಘೋಷಿಸಿತು.



ಫಿಟ್ ಆಗಿದ್ದರೆ ಆನಂದದಿಂ...

### ಸಾಕಷ್ಟು ಜನಪ್ರಿ...



ವೃಕ್ಷಾರೋಪಣ ಅಭಿಯಾ... ಎರಡೆರಡು ಗಿಡ ನೆಟ್ಟು 3 ... ತೆಗೆದುಕೊಳ್ಳಬೇಕು. ಶುದ್ಧ ... ಪೀಳಿಗೆಗೆ ನೀಡಬೇಕಿದೆ.


| ವಿವೇಕ ಪ...

### ನಿತ್ಯ...



ಬೆಳ... ಓಡು... ನಿತ್ಯ... ಓಡು... ಹಾಫ... ಆಯೋಜಕರಿಗೆ ಅಭಿನಂದನೆ...

| ಆರ್. ...



ಭಾನುವಾರ ಹುಬ್ಬಳ್ಳಿ ಹಾಫ್ ಮ್ಯಾರಥಾನ್‌ನಲ್ಲಿ ಪಾಲ್ಗೊಂಡ ಸ...

S.H.A.S. Samiti's K.S.J. Arts & S.M.S. Commerce College for Women Dharwad
Principal
S.H... Samiti's
Smt. K. S. Jigalur Ar...
Dr. (Smt) S. M. Shesgiri ...
College for Women, ...